1	2	3	4
	VI. COMPANIES DEEMED AS GOVERNMENT COMPANIES UNDER THE COMPANIES ACT, 1986.		
1.	Mysore Acetate and Chemicals Company Limited.	340-65	625
2.	Karnataka Agro Proteins Limited.	133-32	86
3.	Mysore Lamp Works.	72-68	1426
		114730-11	143425

ಮನವಿಗಳನ್ನೊಪ್ಪಿಸುವುದು

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಗುಬ್ಬಿ ತಾಲ್ಲೂಕಿನ ಕೆಲವು ಹಳ್ಳಿಗಳ ರಸ್ತೆಗಳನ್ನು ದುರಸ್ತಿ ಮಾಡಿ, ಸೇತುವೆಗಳನ್ನು ನಿರ್ಮಿಸಿ ಡಾಂಬರೀಕರಣ ಮಾಡುವ ಬಗ್ಗೆ, ಇಡಗೂರು ಗ್ರಾಮಸ್ಥರ ಮನವಿ.

ಮತ್ತು ಗುಬ್ಬಿ ತಾಲ್ಲೂಕಿನ ಇಡಗೂರ ಹಳ್ಳಿಗೆ ಬೆಂಗಳೂರಿನಿಂದ ನೇರ ಬಸ್ ಸೌಕರ್ಯವನ್ನು ಒದಗಿಸುವ ಬಗ್ಗೆ ಇಡಗೂರು ಗ್ರಾಮಸ್ಥರ ಮನವಿಗಳನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಮನವಿಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ ಗುತ್ತಿಗೆ ಉಪನ್ಯಾಸಕರು ಪೆರವಣಿಗೆಯಲ್ಲಿ ಬರುತ್ತಿದ್ದಾರೆ

(ಗೊಂದಲ)

ಅಧ್ಯಕ್ಷರು.—ನೀವು ಹೊಸದಾಗಿ ಆರಿಸಿ ಬಂದಿಲ್ಲ. ನಿಮಗೆ ನಿಯಮ ಗೊತ್ತಿದೆ. ಈಗ ಕಾಲಿಂಗ್ ಅಟೆನ್‌ಷನ್ ಇದೆ. ನೀವು ನಿಯಮ ೫೫ಳಿ ಇಲ್ಲವೇ ನಿಯಮ ೬೮ರ ಪ್ರಕಾರ ನೋಟೀಸ್ ಕೊಡಿ. ಈ ಬಗ್ಗೆ ನನಗೂ ಗೊತ್ತಿಲ್ಲ ಸರ್ಕಾರಕ್ಕೂ ಗೊತ್ತಿಲ್ಲ. ಹಾಗೆಯೇ ನೀವು ಎದ್ದು ಹೇಳಿದರೆ ಹೇಗೆ ?

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ನಾನು ಕೇಳಿಕೊಳ್ಳುವುದೇನೆಂದರೆ.....

ಶ್ರೀ ಪಂಪಾಪತಿ.—ತಾವು ದಯವಿಟ್ಟು ಆವಕಾಶ ಮಾಡಿಕೊಡಬೇಕು. ಮಾನ್ಯ ವಿದ್ಯಾ ಮಂತ್ರಿಗಳು ಇಲ್ಲಿ ಇದ್ದಾರೆ ಅವರು ಏನು ಉತ್ತರ ಕೊಡುತ್ತಾರೋ ಕೊಡಲಿ.

ಶ್ರೀ ಎಂ.ಎಸ್. ಕೃಷ್ಣನ್,—ಕೆಲವು ಸಂದರ್ಭದಲ್ಲಿ ಕೆಲವು ವಿಷಯಗಳು ತಕ್ಷಣ ನಡೆಯುತ್ತವೆ, ಅದನ್ನು ತಮ್ಮ ಗಮನಕ್ಕೆ ತರುವುದು ಹೇಗೆ ?

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ, ತಾವು ಹೇಳಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ. ತಾವು ಏನು ಹೇಳುವುದು ಇದ್ದರೂ ಮೊದಲು ನೋಟೀಸ್ ಕೊಡಬೇಕು. ನಾನು ಷಾರ್ಟ್ ನೋಟೀಸ್ ಕ್ವೆಶ್ಚನ್ ಕೊಟ್ಟರೂ ಅಲೋ ಮಾಡುತ್ತೇನೆ, ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟರೂ ಅಲೋ ಮಾಡುತ್ತೇನೆ ನಿಯಮ ೬೮ರ ಪ್ರಕಾರ ಕೊಟ್ಟರೂ ಅಲೋ ಮಾಡುತ್ತೇನೆ, ೫೫ಳಿರ ಪ್ರಕಾರ ಕೊಟ್ಟರೂ ಅಲೋ ಮಾಡುತ್ತೇನೆ. ಇಷ್ಟೆಲ್ಲಾ ತಮಗೆ ಅವಕಾಶ ಮಾಡಿಕೊಡುತ್ತಿದ್ದೇನೆ. ಈಗ ತಾವು ಏನು ಹೇಳುತ್ತಿದ್ದೀರಿ ಎನ್ನುವ ವಿಷಯ ನಮಗೆ ಗೊತ್ತಾಗುವುದು ಬೇಡವೆ ? ಏಕಮ್ ಈ ರೀತಿ ಹೇಳಿದರೆ ಹೇಗೆ ? ಇದೆಲ್ಲಾ ಹೊಸ ತರಹ ಆಗುತ್ತದೆ, ಆದ್ದರಿಂದ, ದಯವಾಡಿ ಕುಳಿತುಕೊಳ್ಳಬೇಕು. ಈಗ ನೀವು ಬರೆದು ಕಳುಹಿಸಿ ಆದರ ಮಹತ್ವ

ನೋಡಿ ಹೇಳುತ್ತೇನೆ. ತಾವು ರೂಲ್ಸ್ ಆಂಡ್ ರೆಗ್ಯುಲೇಷನ್ ಮುರಿಯುತ್ತೀರಿ, ಅದು ಬೇಡ, ನನಗೆ ಬರೆದು ಕಳುಹಿಸಿಕೊಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ನಾನು ನಿಯಮದ ಪ್ರಕಾರ ಕಳುಹಿಸಿ ಕೊಟ್ಟಿದ್ದೇನೆ. ಗುತ್ತಿಗೆ ಉಪನ್ಯಾಸಕರು ಸುಮಾರು ೧೦ ಸಾವಿರ ಜನ ಮೆರವಣಿಗೆಯಲ್ಲಿ ಬರುತ್ತಿದ್ದಾರೆ. ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು.—ತಾವು ನಿಯಮದ ಪ್ರಕಾರ ಕೊಟ್ಟಿದ್ದರೆ ಅಡ್ಮಿಟ್ ಮಾಡುತ್ತೇನೆ.

(ಗೊಂದಲ)

ಬಿ.ಎಸ್.ಯಡಿಯೂರಪ್ಪ.—ಕಾಲ್ ಅಟೆನ್‌ಷನ್ ಅಡ್ಮಿಟ್ ಮಾಡಿದರೂ ಚರ್ಚೆಗೆ ಅವಕಾಶ ಕೊಡಬೇಕು. ಅದು ಇವೊತ್ತು ಬಂದರೆ ಒಳ್ಳೆಯದು.

(ಗೊಂದಲ)

ಅಧ್ಯಕ್ಷರು.—ಸಿಸಿಲರಲ್ಲಿ ಮೊದಲನೆಯದು ವೆಂಕಟರಾಮಯ್ಯನವರದೇ ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ನಾನೂ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ, ಚರ್ಚೆಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಪಂಪಾಪತಿಯವರು, ಮಾನ್ಯ ಕೃಷ್ಣನ್‌ರವರು ಎತ್ತಿರತಕ್ಕ ವಿಚಾರವನ್ನು ನೋಟೀಸ್ ಕೊಟ್ಟೇ ಪ್ರಸ್ತಾಪ ಮಾಡಬೇಕಾಗುತ್ತದೆ. ಏಕೆಂದರೆ, ನಾವು ನಿಯಮಾವಳಿ ಒಪ್ಪಿಕೊಂಡಿದ್ದೇವೆ. ಆದರೆ ನಮಗೆ ವಿಚಾರ ಈಗ ತಾನೆ ಬಂದಿದೆ.

(ಗೊಂದಲ)

ಅಧ್ಯಕ್ಷರು.—ಈಗಲಾದರೂ ಕಳುಹಿಸಿಕೊಡಿ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಅರ್ಜೆಂನ್ಸಿ ಏತಕ್ಕೆ ಅಂದರೆ ೨೦೦-೩೦೦ ಜನರನ್ನು ಅರೆಸ್ಟ್ ಮಾಡಿದ್ದಾರೆ ಎಂದು ತಿಳಿದು ಬಂದಿದೆ.

ಅಧ್ಯಕ್ಷರು.—ಅರ್ಧ ಗಂಟೆ ಮೊದಲೇ ನನಗೆ ನೋಟೀಸ್ ಕೊಡಬೇಕಾಗಿತ್ತು, ಈಗಲಾದರೂ ಬರೆದು ಕಳುಹಿಸಿಕೊಡಿ.

ಶ್ರೀ ಎಸ್. ಬಂಗಾರಪ್ಪ.—ಈಗ ೫ ನಿಮಿಷಕ್ಕೆ ಮುಂಚೆ ನಮಗೆ ತಿಳಿದುಬಂದಿದೆ.

ಅಧ್ಯಕ್ಷರು.—ನಿಯಮ ೩೫ರ ಪ್ರಕಾರ ಇವೊತ್ತೇ ಇಡುತ್ತೇನೆ, ಬರೆದು ಕಳುಹಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ನಾನು ಒಂದು ಕಾಲ್ ಅಟೆನ್‌ಷನ್‌ಗೆ ಕಳುಹಿಸಿ ಕೊಟ್ಟಿದ್ದೇನೆ. ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಈಗ ನೀವು ಕೊಟ್ಟಿದ್ದೀರಿ, ಅವರು ಕೊಟ್ಟಿದ್ದಾರೆ, ನಾನು ಇದರ ಪ್ರಾಮುಖ್ಯತೆಯನ್ನು ನೋಡಿ ಅವಕಾಶ ಮಾಡಿಕೊಡಬೇಕು, ಅದರ ಬಗ್ಗೆ ವಿಚಾರ ಮಾಡುತ್ತೇನೆ ದಯವಿಟ್ಟು ತಾವು ಕುಳಿತುಕೊಳ್ಳಬೇಕು.